ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2003
ಸದಸ್ಯರ ಹೆಸರು	:	ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	16-03-2022.
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಪ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ಬೆಂಗಳೂರು – ಮಂಗಳೂರು ಹೆದ್ದಾರಿಯ ಹಾಸನದಿಂದ ಸಕಲೇಶಪುರದವರೆಗಿನ ರಸ್ತೆಯು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರಾಷ್ಟ್ರೀಯ ಹೆದ್ದಾರಿ-75ರ ಹಾಸನದಿಂದ-ಮಾರನಹಳ್ಳಿಯವರೆಗೆ ಕಿ.ಮೀ 189.700 (ವಿನ್ಯಾಸ ಚೈನೇಜ್ ಕಿ.ಮೀ 184.912) ದಿಂದ ಕಿ.ಮೀ 237.060 (ವಿನ್ಯಾಸ ಚೈನೇಜ್ ಕಿ.ಮೀ. 230.060) ವರೆಗಿನ 4 ಪಥದ ಒಟ್ಟು ಕಿ.ಮೀ 45.148 ವರೆಗಿನ ರಸ್ತೆಯು ರೂ.537.92 ಕೋಟಿಗಳ ಮೊತ್ತಕ್ಕೆ ಅನುಮೋದನೆಯಾಗಿರುತ್ತದೆ. ಕಾಮಗಾರಿಗೆ ಅನುಮೋದನೆಯನ್ನು ದಿನಾಂಕ: 29.12.2015ರಲ್ಲಿ ದೊರೆತಿರುತ್ತದೆ. M/s. Isolux Corsan India Engineering and Construction Private Limited ಇವರಿಗೆ ಗುತ್ತಿಗೆ ವಹಿಸಲಾಗಿರುತ್ತದೆ ಹಾಗೂ M/s. Rajkamal Builders, Private Limited, ರವರಿಗೆ ಉಪಗುತ್ತಿಗೆಯನ್ನು ನೀಡಲಾಗಿರುತ್ತದೆ. ದಿನಾಂಕ: 31.03.2016 ರಂದು ಕರಾರು ಗುತ್ತಿಗೆಯನ್ನು ವಹಿಸಲಾಗಿರುತ್ತದೆ ಹಾಗೂ ದಿನಾಂಕ: 06.03.2017 ರಂದು ನೇಮಕಾತಿ ದಿನಾಂಕವನ್ನು ನೀಡಲಾಗಿರುತ್ತದೆ. ಈ ಕಾಮಗಾರಿಯು ಗುತ್ತಿಗೆ ಕರಾರಿನಂತೆ ಕಾಮಗಾರಿ ನಿರ್ಮಾಣ ಅವಧಿಯು ಮಾರ್ಚ್ 2017 ರಿಂದ ಮಾರ್ಚ್ 2019ರವರೆಗೆ ಇರುತ್ತದೆ. ನಂತರ ಅವಧಿಯನ್ನು ಪರಿಷ್ಕರಿಸಿ ದಿನಾಂಕ: 10.03.2022ರವರೆಗೆ ನೀಡಲಾಗಿರುತ್ತದೆ.
ಆ)	ರಸ್ತೆಯು ಸಂಪೂರ್ಣವಾಗಿ ಹಾಳಾಗಿರುವ ಕಾರಣಕ್ಕಾಗಿ ಈ ಪ್ರದೇಶದಲ್ಲಿ ಅತಿ ಹೆಚ್ಚು ಅಪಘಾತಗಳಾಗುತ್ತಿದ್ದು, ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ;	E.P.C. ಗುತ್ತಿಗೆದಾರರ ಆರ್ಥಿಕ ಮುಗ್ಗಟ್ಟಿನಿಂದಾಗಿ (ದಿವಾಳಿತನ) ಮತ್ತು ಕರಾರು ಒಪ್ಪಂದದ ಹೊಣೆಗಾರಿಕೆಯಿಂದಾಗಿ ಉಪಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗತಿಯಲ್ಲಿ ಕೈಗೊಳ್ಳುವಲ್ಲಿ ವಿಫಲರಾಗಿರುತ್ತಾರೆ. ಅಲ್ಲದೆ ಈ ಕೆಳಕಂಡ ಕಾರಣಗಳಿಂದಾಗಿ ಯೋಜನೆ ವಿಳಂಬವಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. 1. ಕ್ವಾರಿ ಪ್ರದೇಶಕ್ಕೆ ಮತ್ತು ಬ್ಲಾಸ್ಟಿಂಗ್ ಮಾಡಲು ಅನುಮೋದನೆ ದೊರೆಯದ ಕಾರಣ. 2. ಮುಖ್ಯ ಗುತ್ತಿಗೆದಾರನ ಆರ್ಥಿಕ ಮುಗ್ಗಟ್ಟಿನಿಂದಾಗಿ (ದಿವಾಳಿತನ).

		3. ಕೋವಿಡ್-19 ನಿಂದಾಗಿ ಎರಡು ಬಾರಿ ಸಂಪೂರ್ಣ ಲಾಕ್‌ಡೌನ್ ಆಗಿದ್ದರಿಂದ. 4. ಭಾರಿ ಮಳೆಯಿಂದಾಗಿ ಕಾಮಗಾರಿಯು ವಿಳಂಬವಾಗಿರುತ್ತದೆ. ಮೇಲೆ ತಿಳಿಸಿರುವ ಅಂಶಗಳ ಹೊರತಾಗಿಯೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ಪ್ರಸ್ತುತ ಈ ರಸ್ತೆಯು ಹಾಳಾಗಿದ್ದು, ಸದರಿ ರಸ್ತೆಯು ದುರಸ್ಥಿ ಕಾರ್ಯ ಕೈಗೊಂಡು, ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು ಶೇ.40 ರಷ್ಟು ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸ ಲಾಗಿದೆ ಹಾಗೂ ಶೇ. 36.50 ರಷ್ಟು ಆರ್ಥಿಕ ಪ್ರಗತಿ ಸಾದಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಇದಲ್ಲದೆ ಮೇಲೆ ಪ್ರಸ್ತಾಪಿಸಿದ ರಸ್ತೆಯು 4 ಲೇನ್‌ಗೆ ಅಪ-ಗ್ರೇಡ್ ಮಾಡಲಾಗುತ್ತಿದೆ ಮತ್ತು 4 ಲೇನ್ ರಸ್ತೆಯು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.
ಇ)	ಈ ರಸ್ತೆಯು ಸಂಪೂರ್ಣವಾಗಿ ದುರಸ್ಥಿಯಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ಯಾವಾಗ ದೊರೆಯುತ್ತದೆ.?	ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ತಿಳಿಸಿರುವಂತೆ ಸದರಿ ಯೋಜನೆಯನ್ನು ಮಾರ್ಚ್-2023 ರೊಳಗೆ ಪೂರ್ಣಗೊಳಿಸಲು ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ಕಡತ ಸಂಖ್ಯೆ: ಲೋಇ 103 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು